## ಕಳೆದ ಸಂಚಿಕೆಯಲ್ಲಿ



ಪೂರ್ವಿಕಾಳೊಂದಿಗಿನ ಚೋರ್ ಬಜಾರ್ ಭೇಟಿ ಹಾಗೂ ಮೊದಲ ಚುಂಬನದಿಂದ ಸೋನಾ ಪುಳಕಿತನಾದ. ಆ ರಸಗಳಿಗೆಯ ಮುಂದುವರಿಕೆಯಂತೆ ಒಂದು ವಾರ ಕಾಲ ಲಾಸ್ ವೆಗಾಸ್‌ಗೆ ಹೋಗಿ ಬರುವ ಪ್ರಸ್ತಾಪವನ್ನು ಪೂರ್ವಿಕಾ ಮುಂದಿಟ್ಟಳು. ಸೋನಾನ ವಿದೇಶ ಪ್ರವಾಸದ ಬಗ್ಗೆ ಅವನ ಕುಟುಂಬ ಸಂಭ್ರಮಿಸಿತು. ಹೊಸ ಅನುಭವಕ್ಕೆ ಅವನು ಕೂಡ ಉತ್ಸುಕನಾಗಿದ್ದ. ಲಾಸ್ ವೆಗಾಸ್‌ನ ಮುಕ್ತ ಹಾಗೂ ರೋಚಕ ಬದುಕನ್ನು ಪೂರ್ವಿಕಾ ಉತ್ಸಾಹದಿಂದಲೇ ಬಣ್ಣಿಸಿದಳು. ಲಾಸ್ ವೆಗಾಸ್‌ಗೆ ಹಾರಿಬಂದ ಯುವಜೋಡಿಯನ್ನು ಪೂರ್ವಿಕಾಳ ಗೆಳತಿ ಮೈಥಿಲಿ ಹಾಗೂ ಅವಳ ಸಂಗಾತಿ ಲೆವಿನ್ಸ್ ಆತ್ಮೀಯವಾಗಿ ಸ್ವಾಗತಿಸಿದರು. ತಮಗೆ ದೊರೆತ ಬೆಚ್ಚನೆ ಆತಿಥ್ಯದ ಬಗ್ಗೆ ಸೋನಾ ಖುಷಿಯಾಗಿದ್ದ. ಪೂರ್ವಿಕಾಳ ಸಹಚರ್ಯ ಹಿತಕರವಾಗಿದ್ದರೂ, ಅವನಾಗಲೀ ಅವಳಾಗಲೀ ಹದ್ದುಮೀರಿ ವರ್ತಿಸಿರಲಿಲ್ಲ. ಇಬ್ಬರ ಅಭಿರುಚಿಗಳನ್ನು ಪರಸ್ಪರ ಗೌರವಿಸುತ್ತಿದ್ದರು. ಪ್ರವಾಸದ ಕೊನೆಗೆ ಅತಿಥಿಗಳಿಗಾಗಿ ಲೆವಿನ್ಸ್ ಭರ್ಜರಿ ಔತಣಕೂಟವೊಂದನ್ನು ಏರ್ಪಡಿಸಿದ. ಆತಿಥೇಯರ ಒತ್ತಾಯದ ಮೇರೆಗೆ ಸೋನಾ ವಿಶೇಷ ಕಾಕ್‌ಟೇಲ್ ರುಚಿ ನೋಡಿದ. ಆ ರುಚಿ ದೇಹರುಚಿಯತ್ತ ದಾರಿ ಮಾಡಿಕೊಟ್ಟಿತು.

ಹೂಡಿದ್ದಾರೆ. ಅವರ ಮೂಲಕ ಸಿಬಿಐ, ಇ.ಡಿ. ಇಲಾಖೆಗಳ ಮೇಲೆ ಒತ್ತಡ ತಂದಿದ್ರಿ. ದೇಶಪಾಂಡೆ ತುಂಬಾ ಹುಷಾರಿ ಮನುಷ್ಯ. ಬೇನಾಮಿ ಹೆಸರಲ್ಲಿ ಬೇಕಾದಷ್ಟು ಮಾಡಿದ್ದಾರೆ. ಅಲ್ಲದೆ ವಿದೇಶದಲ್ಲೂ ಮಸ್ತಾಗಿ ಬೇಕಾದಷ್ಟು ಆಸ್ತಿ ಮಾಡಿದ್ದಾರೆ. ಅದೆಲ್ಲಾ ಬಿಡಿ. ಪಾಪದ ಕೊಡ ತುಂಬಿದಾಗ ಎಂಥವರಾದರೂ ತಲೆ ತಗ್ಗಿಸಬೇಕಾಗುತ್ತದೆ' ಎಂದು ಇಂಟರ್ ಕಾಮ್‌ನಲ್ಲಿ ಮೂರು ಊಟ ಹೇಳಿದ್ದ.

'ಊಟ ಬೇಡ, ಮಾತು ಮುಗಿಸಿಕೊಂಡು ನಾವು ಬೇಗ ಹೋಗುತ್ತೇವೆ' ಎಂದಿದ್ದ ಗುನ್ನಾಲಾಲ್.

'ಅರೆ ಶೇಟ್ ಜಿ, ಊಟದಲ್ಲಿ ವಿಷವಿಟ್ಟು ನಿಮ್ಮನ್ನೇನೂ ಸಾಯಿಸುವುದಿಲ್ಲ. ಅಂಡರ್ ವರ್ಲ್ಡ್‌ನಲ್ಲಿ, ರಿಯಲ್ ಎಸ್ಟೇಟ್ ಬಿಸಿನೆಸ್‌ನಲ್ಲಿ ವಿಶ್ವಾಸವೇ ದೊಡ್ಡ ಆಯುಧ. ವಿಶ್ವಾಸದ್ರೋಹ ಆದ್ರೆ ಬೇರೆ ಆಯುಧಗಳು ಮಾತನಾಡ್ತಾವೆ. ಹನ್ನೆರಡು ವರ್ಷ ಡಿ. ಗ್ಯಾಂಗ್ ವಿರುದ್ಧ ಕಾದಾಡಿದ್ದೀನಿ. ಆದ್ರೆ ಯಾವತ್ತೂ ಯಾರ ಪ್ರಾಣಕ್ಕೂ ಕುತ್ತು ತರಲಿಲ್ಲ. ದಾವೂದ್ ಇಲ್ಲಿಂದ ಜಾಗ ಖಾಲಿ ಮಾಡಿದ ಮೇಲೆ ಮುಂಬಯಿ ಪ್ರಶಾಂತವಾಗಿದೆ. ಅವನ ಕಡೆಯವರು ಇದ್ರೂ ಈಗ ಬಾಲ ಬಿಚ್ಚಲ್ಲ. ಅವರವರ ವ್ಯವಹಾರ ನೋಡಿಕೊಂಡು ಹೋಗ್ತಿದಾರೆ. ಮುಂಬಯಿಯಲ್ಲಿ ಈಗ ಅಂಡರ್ ವರ್ಲ್ಡ್ ಹವಾ ಇಲ್ಲ ಬಿಡಿ. ಪೊಲೀಸರು ಈ ಇಪ್ಪತ್ತು ವರ್ಷಗಳಿಂದ ನಾಲ್ಕು ನೂರು ಜನ ಅಂಡರ್ ವರ್ಲ್ಡ್‌ನವರನ್ನು ಹೊಡೆದು ಹಾಕಿದ್ದಾರೆ. ನಿಜಕ್ಕೂ ಅದೊಂದು ರೀತಿ ಒಳ್ಳೆಯದೇ ಆಯ್ತು. ನಿಮಗೂ ಅರುಣ್ ಗಾವ್ಲಿಗೂ ಹಳೆಯ ದೋಸ್ತಿ ಇತ್ತು ಅಂತ ಕೇಳಿ ಬಂತು. ಆದರೆ ಗಾವ್ಲಿ ನಾಗಪುರ ಸೆಂಟ್ರಲ್ ಜೈಲಿನಲ್ಲಿ ಜೀವ ಸವೆಸ್ತಾ ಇದಾರೆ. ಈಗ ಮುಂಬಯಿ ಶಾಂತವಾಗಿದೆ. ಭೂಗತ ಪಾತಕಿಗಳು ನಡೆಸುತ್ತಿದ್ದ ಕೆಲಸಗಳನ್ನು ಈಗ ರಾಜಕಾರಣಿಗಳು, ವಿವಿಧ ಇಲಾಖೆಯ ಅಧಿಕಾರಿಗಳೇ ಕಾನೂನುಗಳ ಆಶ್ರಯದಡಿ ನಡೆಸುತ್ತಿದ್ದಾರೆ' ಎಂದು ನಗುತ್ತಾ ಗುಲ್ಶನ್ ಕುಮಾರ್ ಟೀಪಾಯ್ ಮೇಲಿದ್ದ ವಿಸ್ಕಿ ಗ್ಲಾಸನ್ನು ಕೈಗೆತ್ತಿಕೊಂಡು ಲಾರ್ಜ್ ಸಿಪ್ ಕುಡಿದಿದ್ದ. ಗುನ್ನಾಲಾಲ್ ಸಮಾಧಾನವಾಗಿ 'ಗುಲ್ಶನ್ ಬಾಯ್, ಗಾವ್ಲಿ ಬಹಳ ಹಿಂದೆ ಟ್ರೇಡ್ ಯೂನಿಯನ್ ಲೀಡರ್ ಆಗಿದ್ದಾಗ ಎರಡು ಮೂರು ಸಾರಿ ನಮ್ಮ ಫ್ಯಾಕ್ಟರಿಗೆ ಬಂದಿದ್ದರು. ಅದು ಬಿಟ್ಟರೆ ನನಗೆ ಅಂಥ ಬೇರೆ ಯಾವ ಕನೆಕ್ಷನ್ ಇರಲಿಲ್ಲ. ನಮ್ಮ ಹುಡುಗನಿಗೆ ಹುಡುಗಿಯನ್ನು ಖುದ್ದು ದೇಶಪಾಂಡೆಯವರೇ ಪ್ರೊಪೋಸ್ ಮಾಡಿದ್ದು. ಮದುವೆಯೇನೂ ನಿಶ್ಚಯವಾಗಿಲ್ಲ. ನಾವೇ ಒಪ್ಪಿ ಹುಡುಗ ಹುಡುಗಿಯನ್ನು ವಾರದ ಮಟ್ಟಿಗೆ ಅಮೆರಿಕಕ್ಕೆ ಕಳಿಸಿದ್ದೇವೆ. ಒಬ್ಬರಿಗೊಬ್ಬರು ಚೆನ್ನಾಗಿ ಅರ್ಥಮಾಡಿಕೊಂಡರೆ ಮುಂದೆ ಮದುವೆ ಮಾಡೋಣವೆಂದು ನಿರ್ಧರಿಸಿದ್ದೇವೆ' ಎಂದು ಗುನ್ನಾಲಾಲ್ ಬಹಳ ಸಹಜವಾಗಿ ಹೇಳಿದ್ದ.

ಗುಲ್ಶನ್ ಕುಮಾರ್ ತನ್ನ ಲೆದರ್ ಬ್ಯಾಗಿನಿಂದ ಆರು ಫೋಟೋಗಳನ್ನು ತೆಗೆದು ಗುನ್ನಾಲಾಲನ ಕೈಗೆ ಕೊಟ್ಟಿದ್ದ. ಸ್ಫುರದ್ರೂಪಿ ಹುಡುಗನೊಬ್ಬನ ಜೊತೆ ಪೂರ್ವಿಕಾ ದೇಶಪಾಂಡೆ ಇರುವ ಫೋಟೋಗಳು. ಅಶ್ಲೀಲ ಫೋಟೋಗಳಲ್ಲದಿದ್ದರೂ ತುಂಬಾ ಆತ್ಮೀಯವಾಗಿ, ಪ್ರೀತಿಯ ಸಂಕೇತವಾಗಿ ಇರುವ ಫೋಟೋಗಳು. ಆ ಫೋಟೋಗಳನ್ನು ಪಕ್ಕದಲ್ಲಿ ಕುಳಿತಿದ್ದ ಹರ್ಷವರ್ಧನ್ ಶಿರೋಡ್ಕರ್ ಕೂಡ ನೋಡಿದ. ಹುಡುಗನನ್ನು ಹುಡುಗಿ ಬೈಕ್ ಮೇಲೆ ತಬ್ಬಿ ಹಿಡಿದು ಕೂತಿರುವುದು, ಒಬ್ಬರಿಗೊಬ್ಬರು ಐಸ್‌ಕ್ರೀಂ ತಿನ್ನಿಸುತ್ತಿರುವುದು, ಹುಡುಗ ಹುಡುಗಿಯ ತೊಡೆಯ ಮೇಲೆ ಮಲಗಿರುವುದು, ಒಬ್ಬರನ್ನೊಬ್ಬರು ತಬ್ಬಿ ಕೆನ್ನೆಗೆ ಮುತ್ತು ಕೊಡುತ್ತಿರುವುದು ಮುಂತಾದ ಪ್ರೀತಿ ತುಂಬಿದ ಫೋಟೋಗಳು! ಇತ್ತೀಚೆಗೆ ಪೂನಾದ ಸಂಬಂಧ ಕಡಿದು ಹೋಗಿದ್ದು ನೆನಪಾಗಿ ಗುನ್ನಾಲಾಲನಿಗೆ ಬೇಸರವೂ, ವಿಷಾದವೂ ಒಟ್ಟಿಗೆ ಮೂಡಿದ್ದವು. ಬಿಸಿ ಬಿಸಿ ಊಟ ಬಂದಿತ್ತು. ಬೇಡವೆನ್ನದೆ ಗುನ್ನಾಲಾಲ್, ಹರ್ಷವರ್ಧನ್ ಶಿರೋಡ್ಕರ್ ಗುಲ್ಶನ್ ಕುಮಾರ್ ಜೊತೆ ಊಟ ಮಾಡಿದ್ದರು. ಗುನ್ನಾಲಾಲ್ ಮನದಲ್ಲಿನ ತಾಕಲಾಟವನ್ನು ಗುಲ್ಶನ್ ಕುಮಾರ್ ಗಮನಿಸಿದ್ದ. ಊಟ ಮುಗಿಸಿ ಪಾನ್ ಹಾಕುತ್ತಾ ಗುಲ್ಶನ್ ಕುಮಾರ್ 'ಗುನ್ನಾಲಾಲ್ ಜಿ ನೀವು ಹಿರಿಯರು. ಕಾಲ ಈಗ ತುಂಬಾ ಬದಲಾಗಿದೆ. ಈಗಿನ ಗಂಡು ಮಕ್ಕಳು, ಹೆಣ್ಣು ಮಕ್ಕಳು ಫ್ರೀಯಾಗಿ ಓಡಾಡುತ್ತಾರೆ. ಯಾವ ಕಟ್ಟುಪಾಡುಗಳನ್ನೂ ಪಾಲಿಸುವುದಿಲ್ಲ. ಬರಿ ಹುಡುಗಿಯದೇ ತಪ್ಪೆಂದು ನಾನು ಹೇಳಲಾರೆ. ಎರಡೂ ಕೈ ಸೇರಿದರೇನೆ ಚಪ್ಪಾಳೆ ಆಗುವುದು. ಹುಡುಗಿ ನಿಮ್ಮ ಮನೆಗೆ ಸೊಸೆಯಾಗಿ ಬಂದರೇನು, ನಮ್ಮ ಮನಗೆ ಸೊಸೆಯಾಗಿ ಬಂದರೇನು. ಅವಳಿಗಿಂತಲೂ ಹೈ ಕ್ಲಾಸ್ ಹುಡುಗಿ ನಿಮ್ಮ ಹುಡುಗನಿಗೆ ಸಿಗುತ್ತಾಳೆ. ಆದರೆ ಅವನೋ ಅವಳನ್ನೇ ವಿಪರೀತ ಹಚ್ಚಿಕೊಂಡಿದ್ದಾನೆ. ಈ ಹುಚ್ಚು ಮದುವೆಯಾಗಿ ಒಂದು ಮಗು ಆಗುವವರೆಗೆ ಮಾತ್ರ. ಆಮೇಲೆ ಒಬ್ಬೊಬ್ಬರ ಮುಖ ಒಂದೊಂದು ದಿಕ್ಕು. ಮೆಡಿಸಿನ್ ಓದಿದವನು ನಾನು, ದೇಹದ ವರ್ತನೆಗಳ ಬಗ್ಗೆ ಚೆನ್ನಾಗಿ ಗೊತ್ತು. ಇದನ್ನೆಲ್ಲ ಅವನಿಗೆ ತಿಳಿಹೇಳಿದರೂ ಪ್ರಯೋಜನವಾಗುತ್ತಿಲ್ಲ. ಏಕೆಂದರೆ, ಮನಸ್ಸೆಂಬ ಮರ್ಕಟ ಇದೆಯಲ್ಲ... ಅದು ಯಾರ ಮಾತನ್ನೂ ಕೇಳುವುದಿಲ್ಲ. ಜಗತ್ತಿನಲ್ಲಿ ಬಹುಪಾಲು ಅಪರಾಧಗಳು ನಡೆಯುವುದು ಮನಸ್ಸಿನಲ್ಲಿ ಹುಟ್ಟುವ ವಿಕಾರಗಳಿಂದಲೇ' ಎಂದು ಗುನ್ನಾಲಾಲನ ಕಣ್ಣಲ್ಲಿ ಕಣ್ಣಿಟ್ಟು ಹೇಳಿದ್ದ.

ಗುಲ್ಶನ್ ಕುಮಾರ್ ಮಾತುಗಳು ಗುನ್ನಾಲಾಲನ ಮನ ಕರಗುವಂತೆ ಮಾಡಿದ್ದವು. ಯಾವುದಕ್ಕೂ ಒಂದೆರಡು ದಿನದಲ್ಲಿ ತನ್ನ ನಿರ್ಧಾರವನ್ನು ತಿಳಿಸುವುದಾಗಿ ಹೇಳಿ ಗುನ್ನಾಲಾಲ್ ಶಿರೋಡ್ಕರನೊಂದಿಗೆ ಹೋಟೆಲ್ ದಾಟಿ ಕಾರಿನಲ್ಲಿ ಕುಳಿತ. ಇಂಥ ಕೆಲಸಗಳಿಗೆ ಬಂದಾಗ ಶಿರೋಡ್ಕರನೇ ಡ್ರೈವರ್ ಕೆಲಸವನ್ನೂ ಮಾಡುತ್ತಾನೆ. 'ಚಾಚ, ಈ ವಿದ್ಯಮಾನಗಳಿಂದ ನೀವು ಬೇಸರಿಸಿಕೊಳ್ಳಬೇಡಿ. ಗುಲ್ಶನ್ ಕುಮಾರ್ ಹೇಳಿದಂತೆ ಈಗಿನ ಪೀಳಿಗೆಗೆ ಎಥಿಕ್ಸ್, ನಾರ್ಮ್ಸ್ ಬಗ್ಗೆ ಒಂದಿಷ್ಟೂ ಗೌರವವಿಲ್ಲ. ಇದೆಲ್ಲಾ ಗ್ಲೋಬಲೈಸೇಷನ್ ಪ್ರಭಾವ ಮತ್ತು ಪರಿಣಾಮ. ಈ ಬಗ್ಗೆ ಸಂದೀಪ್ ಕೊಚಾರ್ ಅವರಿಗಾಗಲೀ, ವಿಕ್ರಂ ದೇಶಪಾಂಡೆ ಸಾಹೇಬರಿಗಾಗಲೀ ಈಗಲೇ ತಿಳಿಸೋದು ಬೇಡ. ಸೋನಾ ಬಂದ ಮೇಲೆ ಭವರ್ ಭಯ್ಯಾರೊಂದಿಗೆ ಮಾತನಾಡಿ ಒಂದು ಕರಾರುವಕ್ಕಾದ ತೀರ್ಮಾನಕ್ಕೆ ಬನ್ನಿ. ಗುಲ್ಶನ್ ಕುಮಾರ್ ತಮ್ಮ ಪಕ್ಕದಲ್ಲಿ 9 ಎಂಎಂ ಅಲಾಮಿ ಪಿಸ್ತೂಲ್ ಇಟ್ಟುಕೊಂಡಿದ್ದಿದ್ದನ್ನು ನಾನು ನೋಡಿದೆ. ಸೈಕಾಲಜಿ ಸ್ಟಡಿ ಪ್ರಕಾರ ಮನುಷ್ಯನ ಮನಸ್ಸು ದೇಹದ ಅಂಗಾಂಗಗಳಿಗೆ ಯಾವಾಗ ಏನು ಮೆಸೇಜ್ ಕೊಡುತ್ತದೆಂಬುದನ್ನು ಹೇಳಲಿಕ್ಕೆ ಬಾರದು. ಅದರಲ್ಲೂ ಆತ್ಮಹತ್ಯೆ ಮತ್ತು ಮರ್ಡರ್ ಪ್ರಕರಣಗಳಲ್ಲಿ ಮನಸ್ಸು ಯಾವ ಸ್ಥಿತಿಯಲ್ಲಿ ಇರುತ್ತದೆಂಬುದನ್ನು ನಿರ್ದಿಷ್ಟವಾಗಿ ಹೇಳಲು ಯಾವ ಮನಶಾಸ್ತ್ರ ಅಧ್ಯಯನಕ್ಕೂ ಇದುವರೆಗೆ ಸಾಧ್ಯವಾಗಿಲ್ಲ.